ಎಂ.ವಿ.ಸಿ. 808/2023
ಪಿ.ಡಬ್ಲ್ಯೂ : 01

ದಿನಾಂಕ 10-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

ನಾನು ಸಹಿ ಮಾಡಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದೇನೆ. ಅದರಲ್ಲಿರುವ ವಿಷಯಗಳು ಸರಿ ಇವೆ ಮತ್ತು ಇವು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದೆ. ನಾನು ನನ್ನ ಅರ್ಜಿಯ ಜೊತೆ ಕೆಲವು ದಾಖಲಾತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ನೋಡಿ ಗುರುತಿಸುತ್ತೇನೆ. ಸದರಿ ದಾಖಲಾತಿಗಳನ್ನು ಈ ಕೆಳಕಂಡಂತೆ ನಿಶಾನೆಗೊಳಪಡಿಸಲಾಯಿತು.

| | |
|---|---|
| ನಿಪಿ-1 | ಪ್ರಥಮ ವರ್ತಮಾನ ವರದಿಯ ಯಥಾಪ್ರತಿ |
| ನಿಪಿ-2 | ದೂರಿನ ಯಥಾಪ್ರತಿ |
| ನಿಪಿ-3 | ಸ್ಥಳ ಮಹಜರಿನ ಯಥಾಪ್ರತಿ |
| ನಿಪಿ-4 | ಗಾಯದ ಪ್ರಮಾಣ ಪತ್ರದ ಯಥಾಪ್ರತಿ |
| ನಿಪಿ-5 | ಎ.ಐ.ಆರ್ ವರದಿಯ ಯಥಾಪ್ರತಿ |
| ನಿಪಿ-6 | ಐ.ಎಂ.ವಿ ವರದಿಯ ಯಥಾಪ್ರತಿ |
| ನಿಪಿ-7 | ಅಂತಿಮ ವರದಿಯ ಯಥಾಪ್ರತಿ |
| ನಿಪಿ-8 | ನನ್ನ ಮಗನ ಆಧಾರ್ ಕಾರ್ಡಿನ ಯಥಾಪ್ರತಿ |
| ನಿಪಿ-9 | ನನ್ನ ಆಧಾರ್ ಕಾರ್ಡಿನ ಯಥಾಪ್ರತಿ |
| ನಿಪಿ-10 | ಇನ್‌ಪೇಶೆಂಟ್ ಬಿಲ್ಲು |
| ನಿಪಿ-11 | ಬಿಲ್ಲುಗಳು |
| ನಿಪಿ-12 | ಅಂಗನ್ಯೂನ್ಯತೆ ಪ್ರಮಾಣ ಪತ್ರ |

ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಕೋರಿಕೆ.

**ಈ ಹಂತದಲ್ಲಿ ಪಾಟೀ ಸವಾಲಿಗೆ ಎದುರುದಾರರ ಪರ ವಕೀಲರು ಕಾಲಾವಕಾಶ ಕೋರಿದ್ದು, ನೀಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ.ಮತ್ತು ಸಿ.ಜೆ.ಎಂ
ಉಡುಪಿ.